ನಿ-72 ಕ್ರ-64 ಕಯ್ಯಾಟ

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಮರಿತಿಬ್ಬೇಗೌಡ ಮತ್ತು ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಇವರುಗಳು ನಿಯಮ 72 ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ**

-:0:-

**ವಿಷಯ**:

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯಲ್ಲಿನ (ಎಫ್.ಕೆ.ಸಿ.ಸಿ.ಐ) ಸದಸ್ಯತ್ವ ಸಮಿತಿಯಲ್ಲಿನ ಸದಸ್ಯರು (ಮೆಂಬರ್ ಶಿಪ್ ಕಮಿಟಿ) ಇತರೆ ಸದಸ್ಯರಿಗೆ ವಿನಾಕಾರಣ ಕಿರುಕುಳ ನೀಡುತ್ತಿದ್ದು, ಕಳೆದ ಸಾಲಿನಲ್ಲಿ ಸದಸ್ಯರು ಬಯಸಿದ ವಲಯ (ಸೆಕ್ಟರ್) ಹಂಚಿಕೆ ಮಾಡದೆ, ಸದಸ್ಯತ್ವ ಸಮಿತಿಯ ಸದಸ್ಯರಿಗೆ ಅನುಕೂಲವಾಗುವ ವಲಯಕ್ಕೆ ಸದಸ್ಯರ ಗಮನಕ್ಕೂ ತರದೆ, ಅವರ ಸ್ವಾರ್ಥಕ್ಕಾಗಿ ವಲಯ ಬದಲಾವಣೆ ಮಾಡುತ್ತಿರುವುದಲ್ಲದೆ ಹಲವು ಅಕ್ರಮಗಳನ್ನು ನಡೆಸುತ್ತಿರುವುದರಿಂದ, ಎಫ್.ಕೆ.ಸಿ.ಸಿ.ಐ ಸದಸ್ಯರಿಗೆ ಆಗುತ್ತಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನಸೆಳೆಯಬಯಸುತ್ತೇನೆ.

**ಉತ್ತರ**:

1) ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್.ಕೆ.ಸಿ.ಸಿ.ಐ) ಯು ಒಂದು ಖಾಸಗಿ ಸಂಸ್ಥೆಯಾಗಿದ್ದು, ಇದು ಸರ್ಕಾರದ ಅಧೀನ ಸಂಸ್ಥೆಯಾಗಿರುವುದಿಲ್ಲ.

2) ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್.ಕೆ.ಸಿ.ಸಿ.ಐ)ಯ ಸದಸ್ಯತ್ವ ಸಮಿತಿಯು ಅರ್ಜಿದಾರರಿಗೆ ಸದಸ್ಯರಾಗಲು ಅವಕಾಶ ನೀಡುವ ಸಾಧ್ಯತೆಗಳನ್ನು ಪರಿಶೀಲಿಸುತ್ತದೆ. ಫೆಡರೇಶನ್ ನ ಬೈಲಾಗಳಲ್ಲಿ ಸದಸ್ಯತ್ವದ ವಿವಿಧ ವರ್ಗಗಳನ್ನು ಸೂಚಿಸಲಾಗಿದೆ ಮತ್ತು ವ್ಯಾಖ್ಯಾನಿಸಲಾಗಿದೆ. ಅದರಂತೆ ಸದಸ್ಯತ್ವ ಸಮಿತಿಯು ಅರ್ಜಿದಾರರು ಯಾವ ವರ್ಗಕ್ಕೆ ಸೇರಿದ್ದಾರೆ ಎಂಬ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ ಮತ್ತು ಅರ್ಜಿದಾರರಿಗೆ ಸದಸ್ಯರಾಗಲು ಅವಕಾಶ ನೀಡುವಂತೆ ನಿರ್ದೇಶಕರ ಮಂಡಳಿಗೆ ಶಿಫಾರಸ್ಸು ಮಾಡುತ್ತದೆ. ಪ್ರತಿ ವರ್ಷ ಸದಸ್ಯತ್ವ ಸಮಿತಿಯ ಸದಸ್ಯರನ್ನು ಬದಲಾಯಿಸಲಾಗುತ್ತದೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದ್ದು, ಯಾವುದೇ ರೀತಿಯ ಲಾಭದಾಯಕ/ಸ್ವಾರ್ಥಿ ಅಗತ್ಯಗಳಿಗಾಗಿ ಫೆಡರೇಶನ್ ನಿಂದ ಕ್ಷೇತ್ರಗಳನ್ನು ಬದಲಾಯಿಸುವ / ಬದಲಾಯಿಸಿರುವ ಅಂತಹ ಯಾವುದೇ ನಿದರ್ಶನಗಳು ಇರುವುದಿಲ್ಲ. ಅಲ್ಲದೇ, ಯಾವುದೇ ರೀತಿಯ ಕಿರುಕುಳ ಹಾಗೂ ತಾರತಮ್ಯವನ್ನು ಸದಸ್ಯರಿಗೆ ಮಾಡಿರುವುದಿಲ್ಲವೆಂದು ಕಾರ್ಯದರ್ಶಿ ಜನರಲ್, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಇವರು ತಿಳಿಸಿರುತ್ತಾರೆ.

ಸಂಖ್ಯೆ. ಸಿಐ 310 ಎಸ್‌ಪಿಐ 2022

**(ಡಾ. ಮುರುಗೇಶ ಆರ್.ನಿರಾಣಿ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

64

# ಕರ್ನಾಟಕ ವಿಧಾನ ಪರಿಷತ್ತು

**ಗಮನ ಸೆಳೆಯುವ ಸೂಚನೆ**

**(ನಿಯಮ ೭೨ರ ಮೇರೆಗೆ)**

ಸ್ಥಳ ......ಬೆಂಗಳೂರು......

ದಿನಾಂಕ ......9/9/22......

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ/~~ಶ್ರೀಮತಿ~~ ......ಮರಿತಿಬ್ಬೇಗೌಡ & ಮೋಹನ್ ಕುಮಾರ್ ಕೊಂಡಜ್ಜಿ...... ಯವರಿಂದ

ಕಾರ್ಯದರ್ಶಿಯವರಿಗೆ,

ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಸೌಧ, ಬೆಂಗಳೂರು – ೫೬೦ ೦೦೧.

ಮಾನ್ಯರೇ,

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ೭೨ನೇ ನಿಯಮದ ಮೇರೆಗೆ ಮಹತ್ವದ ಜರೂರಾದ ಕೆಳಕಂಡ ವಿಷಯಗಳ ಬಗ್ಗೆ ......ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ...... ಮಂತ್ರಿಯವರು ......16/9/22...... ದಿನಾಂಕದಂದು ಹೇಳಿಕೆ ನೀಡಬೇಕೆಂಬುದಾಗಿ ವಿನಂತಿಸಿ, ಮಾನ್ಯ ಮಂತ್ರಿಗಳ ಗಮನ ಸೆಳೆಯುವ ನನ್ನ ಉದ್ದೇಶದ ಸೂಚನೆಯನ್ನು ಕೊಡುತ್ತೇನೆ.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯಲ್ಲಿನ (ಎಫ್.ಕೆ.ಸಿ.ಸಿ.ಐ) ಸದಸ್ಯತ್ವ ಸಮಿತಿಯಲ್ಲಿನ ಸದಸ್ಯರು (ಮೆಂಬರ್‌ಶಿಪ್ ಕಮಿಟಿ) ಇತರೆ ಸದಸ್ಯರಿಗೆ ವಿನಾಕಾರಣ ಕಿರುಕುಳ ನೀಡುತ್ತಿದ್ದು, ಕಳೆದ ಸಾಲಿನಲ್ಲಿ ಸದಸ್ಯರು ಬಯಸಿದ ವಲಯ (ಸೆಕ್ಟರ್) ಹಂಚಿಕೆ ಮಾಡದೆ, ಸದಸ್ಯತ್ವ ಸಮಿತಿಯ ಸದಸ್ಯರಿಗೆ ಅನುಕೂಲವಾಗುವ ವಲಯಕ್ಕೆ ಸದಸ್ಯರ ಗಮನಕ್ಕೂ ತರದೆ, ಅವರ ಸ್ವಾರ್ಥಕ್ಕಾಗಿ ವಲಯ ಬದಲಾವಣೆ ಮಾಡುತ್ತಿರುವುದಲ್ಲದೆ ಹಲವು ಅಕ್ರಮಗಳನ್ನು ನಡೆಸುತ್ತಿರುವುದರಿಂದ ಎಫ್.ಕೆ.ಸಿ.ಸಿ.ಐ. ಸದಸ್ಯರಿಗೆ ಆಗುತ್ತಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನಸೆಳೆಯಬಯಸುತ್ತೇನೆ.

ತಮ್ಮ ನಂಬುಗೆಯ,

(ಸಹಿ)

(ಮೋಹನ್ ಕುಮಾರ್ ಕೊಂಡಜ್ಜಿ)

ವಿಧಾನ ಪರಿಷತ್ತಿನ ಸದಸ್ಯ

(......ನಾಮನಿರ್ದೇಶಿತ...... ಚುನಾವಣಾ ಕ್ಷೇತ್ರ)

ಸರ್ಕಾರಿ ಮುದ್ರಣಾಲಯ, ಬೆಂಗಳೂರು ಕಾ.ಸೂ. ಒ298 – 500 ಪ್ರತಿಗಳು